(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಏತಕ್ಕೋಸ್ಕರ ಸ್ಪೇತಂದಿದ್ದೇನೆಂದರೆ, ಇದರಲ್ಲಿ ಮಾಡಿರುವ ಆರೋಪಗಳೆಲ್ಲ ಸಂಪೂರ್ಣ ಸುಳ್ಳು, ನನ್ನ ಮೇಲೆ ಯಾವುದೇ ಆರೋಪ ಇಲ್ಲ. ನಮ್ಮಲ್ಲಿ ಕೆಲವು ನಿರ್ದೇಶಕರು ವಿದೇಶಕ್ಕೆ ಹೋಗಿರುವುದಕ್ಕೆ.....

(ಗೊಂದಲ)

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ತಾವು ಈಗಾಗಲೇ ಹೇಳಿದ್ದೀರಿ. ಈಗ ಮಾನ್ಯ ಸಚಿವರು ಉತ್ತರ ಹೇಳಲಿ. ಅವರಿಗೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಅವ್ಯವಹಾರ ನಡೆದಿರುವ ಬಗ್ಗೆ ಒಂದು ಬುಕ್‌ಲೆಟ್ ಮಾಡಲಾಗಿದೆ. ಬೇಕಾದರೆ ಅದನ್ನು ಕಳುಹಿಸಿ ಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಅವರು ಸುಳ್ಳು ಹೇಳುತ್ತಿದ್ದಾರೆ. ಅವರು ರಾಜೀನಾಮೆ ಕೊಡಬೇಕು.

ಅಧ್ಯಕ್ಷರು : ಯಾರು ರಾಜೀನಾಮೆ ಕೊಡಬೇಕು?

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಹಾಸನದಲ್ಲಿರುವ ಕೆ.ಎಂ.ಎಫ್. ನಲ್ಲಿ ಅವ್ಯವಹಾರ ನಡೆದಿದೆ. ಇದರ ಬಗ್ಗೆ ಕೂಡ ತನಿಖೆ ನಡೆಯುತ್ತಿದೆ. ಅದರ ಬಗ್ಗೆ ಕೂಡ ನಡೆಯಲಿ ಮತ್ತೆ ಕೆಲವು ಸೊಸೈಟಿ ಬಗ್ಗೆ ಹೇಳಿದ್ದಾರೆ. ಒಂದು ಸೊಸೈಟಿ ಅಲ್ಲ, ಎಲ್ಲಾ ಸೊಸೈಟಿ ಬಗ್ಗೆ ತನಿಖೆಯನ್ನು ಮಾಡಿಸಿ ತಪ್ಪಿತಸ್ಥರಿಗೆ ಶಿಕ್ಷೆಯನ್ನು ಕೊಡುವುದು ನನ್ನ ಕರ್ತವ್ಯ. ಇದರಲ್ಲಿ ಯಾರನ್ನೂ ಸ್ಪೇರ್ ಮಾಡುವುದಿಲ್ಲ, ಖಂಡಿತವಾಗಿಯೂ ಎಲ್ಲೆಲ್ಲಿ ದುರುಪಯೋಗವಾಗಿದೆಯೋ ಅದರ ಬಗ್ಗೆ ಆಕ್ಷನ್ ತೆಗೆದುಕೊಳ್ಳುತ್ತೇವೆ. ಆದರೆ ಈ ದುರುಪಯೋಗದ ಹಿನ್ನೆಲೆಯಲ್ಲಿ ನಾನೊಂದು ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದೇನೆಯೇ ಹೊರತು, ಬೇರೆ ಏನೂ ಇಲ್ಲ, ಪತ್ರಿಕೆಯಲ್ಲಿ ಬಂದಿರುವುದಕ್ಕೆ ಇದು ನನ್ನ ಉತ್ತರ. ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ನಮಸ್ಕಾರಗಳು, ಧನ್ಯವಾದಗಳು.....

(ಗೊಂದಲ)

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್.ಡಿ. ರೇವಣ್ಣನವರು ಸದನದ ಬಾವಿಗೆ ಬಂದು ಮಾತನಾಡುತ್ತಿದ್ದರು.)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಅವರು ವಾಪಸ್ ತೆಗೆದು ಕೊಳ್ಳದೆ ಹೋದರೆ, ಅವರು ರಾಜೀನಾಮೆ ಕೊಡಬೇಕಾಗುತ್ತದೆ.

ಅಧ್ಯಕ್ಷರು : ವೆರಿಫೈ ಮಾಡುತ್ತೇನೆ, ನಾನು ನೋಡಿ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ನಾನು ಮಾಹಿತಿಯನ್ನು RTI ಮೂಲಕ ತೆಗೆದುಕೊಂಡಿದ್ದೇನೆ, ಅವರು ರಾಂಗ್ ಇನ್‌ಫರ್ಮೇಶನ್ ಕೊಟ್ಟಿದ್ದಾರೆ.

ಅಧ್ಯಕ್ಷರು : RTI ನಲ್ಲಿ ನೀವು ಕೇಳಿದಷ್ಟು ಕೊಡುತ್ತಾರೆ. ಈಗ ಆಡಿಟ್ ರಿಪೋರ್ಟ್ ಅನ್ನು ವೆರಿಫೈ ಮಾಡಬೇಕಾ, RTI ರಿಪೋರ್ಟ್ ಅನ್ನು ನೋಡಬೇಕಾ? ನೀವು RTI ನಲ್ಲಿ ಕೇಳಿದ್ದನ್ನು ರಿಲೈ ಮಾಡಬೇಕೆಂದರೆ, ಅದು ಏನು ಅರ್ಥ? ಕಾನೂನು ಎನ್ನುವುದು ಏನೂ ಇಲ್ಲವೇ? RTI ನಲ್ಲಿ ಏನೋ ಕೊಟ್ಟರೆಂದರೆ, is it authenticated?

ಶ್ರೀ ಬಿ.ಜೆ. ಪುಟ್ಟಸ್ವಾಮಿ : ಇದೇ ರೀತಿ ಇವರು ಮಿಸ್‌ಗೈಡ್ ಮಾಡುವುದು, ಬೇಕಾದರೆ ಅವರು ಕೋರ್ಟಿಗೆ ಹೋಗಿ ಕ್ಲೀನ್ ಚಿಟ್ ತೆಗೆದು ಕೊಂಡು ಬರಲಿ, ಕೋರ್ಟಿನಲ್ಲಿ ಎನ್‌ಕ್ವೈರಿ ನಡೆಯಬಾರದೆಂದು ಸ್ಟೇ ತೆಗೆದು ಕೊಂಡು ಬಂದಿದ್ದಾರೆ.

ಅಧ್ಯಕ್ಷರು : ನಾನು ವೆರಿಫೈ ಮಾಡಿಸುತ್ತೇನೆ, ನೀವು ತಮ್ಮ ಸ್ಥಾನಕ್ಕೆ ತೆರಳಿ, ನಾನು ಬಿಲ್ ತೆಗೆದುಕೊಳ್ಳುತ್ತೇನೆ, ನೀವು ಯಾರೂ ಮಾತನಾಡು ವುದಿಲ್ಲವೆ?

ಶ್ರೀ ಸಿದ್ದರಾಮಯ್ಯ : ಇದೆಲ್ಲ ಕೋಳಿ ಜಗಳ.

ಶ್ರೀ ಆರ್. ಅಶೋಕ್ : ಸಭಾಧ್ಯಕ್ಷರೆ, ವಿಧಾನ ಪರಿಷತ್ತಿನಲ್ಲಿ ಬಿಲ್ ಪಾಸ್ ಆಗಿದೆ, ದಯವಿಟ್ಟು, ಅದೊಂದು ಬಿಲ್ ಅನ್ನು ತೆಗೆದುಕೊಳ್ಳಿ ನಂತರ ಮಾತನಾಡಲಿ.....

(ಗೊಂದಲ)

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಹೆಚ್.ಡಿ. ರೇವಣ್ಣನವರು ತಮ್ಮ ಆಸನಕ್ಕೆ ತೆರಳಿ ಮಾತನಾಡಲು ಆರಂಭಿಸಿದರು)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಮಂತ್ರಿಗಳು RTI ನಲ್ಲಿರುವ ಮಾಹಿತಿಗೆ ವಿರುದ್ಧವಾಗಿ ಮಾಹಿತಿಯನ್ನು ನೀಡುತ್ತಿದ್ದಾರೆ.....